(ಇಂದು ದಿನಾಂಕಃ **06-10-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ಶ್ರೀ ವಾಯ್ ಎಮ್ ಜಿ ವಕೀಲರಿಂದಃ**

ನನ್ನ ಮದುವೆ ಆಗಿರುತ್ತದೆ. ನನ್ನ ಮನೆಯಲ್ಲಿ ನನ್ನ ತಾಯಿ, ಹೆಂಡತಿ ಹಾಗೂ ಇಬ್ಬರೂ ಮಕ್ಕಳೊಂದಿಗೆ ವಾಸ ಇದ್ದೇನೆ. ನಮ್ಮ ಮಕ್ಕಳು ಶಾಲೆಗೆ ಹೋಗುತ್ತಾರೆ. ನಮ್ಮ ಮನೆತನಕ್ಕೆ ಮಾಸಿಕ ರೂ. **15,000/-** ಖರ್ಚು ಇರುತ್ತದೆ. ನಮ್ಮ ಮನೆತನಕ್ಕೆ ಒಂದು ಟ್ರಾಕ್ಟರ, ಮೋಟಾರಸೈಕಲ್ ಹಾಗೂ ಒಂದು ಕಾರು ಇರುತ್ತದೆ. ಸದರಿ ವಾಹನಗಳಿಗೆ ವಾರ್ಷಿಕವಾಗಿ ರೂ.**35,000/-**ಗಳನ್ನು ವಿಮೆ ರೂಪದಲ್ಲಿ ಪಾವತಿಸುತ್ತೇನೆ. ನಾನು ಬಡ್ಡಿಯ ವ್ಯವಹಾರವನ್ನು ಮಾಡುವುದಿಲ್ಲ. ನಾನು ಹಾಗೂ ನನ್ನ ತಂದೆ ಆರೋಪಿಯೊಂದಿಗೆ ಹೊರತು ಪಡಿಸಿ ಬೇರೆಯವರ ಹತ್ತಿರ ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ನಮ್ಮ ಕುಟುಂಬಕ್ಕೆ ಎ ಪಿ ಎಲ್ ಪಡಿತರ ಚೀಟಿ ಇರುತ್ತದೆ. ನನ್ನ ತಂದೆಗೆ ಆರೋಪಿ ಯಾವ ರೀತಿ ಪರಿಚಯ ಆಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಬ್ಯಾಂಕ್ ವ್ಯವಹಾರದ ಬಗ್ಗೆ ಗೋತಿರುತ್ತದೆ. ನಾನು ಆರೋಪಿಗೆ ದಿಃ **01-01-2018** ರಂದು ರೂ. **15** ಲಕ್ಷಗಳನ್ನು ನೀಡಿರುತ್ತೇನೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಸದರಿ ಮೊತ್ತದ ಹಣವನ್ನು ಮರುಪಾವತಿಸುತ್ತಾನೆ ಎನ್ನುವ ಭರವಸೆ ಇದ್ದರೆ ನೀಡುತ್ತಾರೆ ಎಂದರೆ ಸರಿ.

**2.** ಆರೋಪಿಗೆ ಹಣವನ್ನು ಬ್ಯಾಂಕ್ ಮುಖಾಂತರ ಪಾವತಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನ್ನ ತಂದೆ ಹೇಳಿದ ಕಾರಣ ನಗದು ರೂಪದಲ್ಲಿ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ರೂ **20,000/-** ಕ್ಕಿಂತ ಹೆಚ್ಚಿನ ಹಣವನ್ನು ಬ್ಯಾಂಕ್ ಮುಖಾಂತರ ಮಾತ್ರವೇ ಪಾವತಿಸಬೇಕು ಎಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿಯ ಮನೆಗೆ ಹೋಗಿಲ್ಲ. ಸದರಿಯವರಿಗೆ ಎಷ್ಟು ಆದಾಯ ಇತ್ತು ಎಂದು ನನಗೆ ಗೋತ್ತಿಲ್ಲ ಆದರೆ ನನ್ನ ತಂದೆಗೆ ಗೊತ್ತು ಇರುತ್ತದೆ. ಆರೋಪಿ ಅಂಕವಿಕಲ ಆಗಿರುವುದ್ದರಿಂದ ಆತನಿಗೆ ಕೆಲಸ ಮಾಡಲು ಆಗದ ಕಾರಣ ಆತನಿಗೆ ಯಾವುದೇ ಆದಾಯ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ವ್ಯವಹಾರ ಆದಾಗ ನನಗೆ **30** ವರ್ಷ ವಯಸ್ಸು ಆಗಿತ್ತು. ನನ್ನ ತಂದೆ ಆರೋಪಿಗೆ ಹಣ ನೀಡಿದ್ದರ ಬಗ್ಗೆ ಚೆಕ್ ನಿಪಿ **1** ನ್ನು ಹೊರತುಪಡಿಸಿ ಬೇರೆ ದಾಖಲೆಗಳು ಇರುವುದಿಲ್ಲ. ಆರೋಪಿ ದಿಃ **17-04-2018** ರಂದು ಚೆಕ್ ನ್ನು ನೀಡಿರುತ್ತಾನೆ. ಹಣ ಪಾವತಿ ಮಾಡಿದ್ದರ ಬಗ್ಗೆ ಬಾಂಡ್ ನ್ನು ಬರೆಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನ್ನ ತಂದೆಗೆ ಗೊತ್ತು ಎಂದು ಹೇಳುತ್ತಾರೆ. ಸದರಿ ವ್ಯವಹಾರ ಬಗ್ಗೆ ನನಗೆ ಏನೂ ಗೊತ್ತಿಲ್ಲ ಹಾಗೂ ನನ್ನ ತಂದೆಗೆ ಗೊತ್ತು ಇರುತ್ತದೆ ಎಂದರೆ ಸರಿ. ದೂರನ್ನು ಅಂದಾಜಿನ ಮೇಲೆ ತಯಾರಿಸಿ ಸಲ್ಲಿಸಲಾಗಿರುತ್ತದೆ ಎಂದರೆ

ಸರಿಯಲ್ಲ. ಸಾಕ್ಷಿಗೆ ಭಾವ ಚಿತ್ರವನ್ನು ತೋರಿಸಲಾಗಿ ಅದು ಆರೋಪಿಗೆ ಸಂಭಂದಿಸಿದ್ದು ಎಂದು ನುಡಿದ ಕಾರಣ ನಿಪಿ ಡಿ 1 ಎಂದು ಗುರುತಿಸಲಾಯಿತು. ಆರೋಪಿಗೆ ಯಾವ ರೀತಿ ಹಣಕಾಸಿನ ಅಡಚಣೆ ಇತ್ತು ಎಂದು ನನಗೆ ಗೊತ್ತಿಲ್ಲ. ಸುಳ್ಳು ಅಂಶಗಳನ್ನು ಪ್ರತಿಪಾದಿಸಿ ದೂರನ್ನು ಸಲ್ಲಿಸಿರುತ್ತೇನೆ.

3. ನಿಪಿ 1 ನ್ನು ಆರೋಪಿ ಬರೆದು ತಂದು ಕೊಟ್ಟಿರುತ್ತಾರೆ. ನಿಪಿ 1 ನ್ನು ನಾನು ಬ್ಯಾಂಕಿಗೆ ಒಂದು ಬಾರಿ ಹಾಜರುಪಡಿಸಿರುತ್ತೇನೆ. ನಿಪಿ 2 ರಲ್ಲಿ ಬ್ಯಾಂಕಿನ ಸೀಲ್ ಹಾಗೂ ಸಹಿ ಇಲ್ಲ ಎಂದರೆ ಸರಿ. ನಿಪಿ 1 ನ್ನು ಬ್ಯಾಂಕಿಗೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ 1 ರ ಹಿಂಬದಿಗೆ ವಿಜಯಾ ಬ್ಯಾಂಕ ಎಂದು ದಿಃ 24-04-2018 ಎಂದು ಸೀಲ್ ಹಾಕಲಾಗಿದೆ ಎಂದರೆ ಸರಿ. ವಿಜಯಾ ಬ್ಯಾಂಕಿನ ಮೆಮೂ ನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

4. ನನಗೆ ಒಬ್ಬ ವಿನಾಯಕ ಮಲ್ಲಪ್ಪ ಕುರಿ ರವರ ಪರಿಚಯ ಇದೆ. ಸದರಿಯವರು ನನ್ನ ಗೆಳೆಯ ಎಂದರೆ ಸರಿ. ನನಗೆ ಅಪ್ಪಾಸಾಬ ರಾಚಪ್ಪ ಅರಳಿ ರವರ ಪರಿಚಯ ಇಲ್ಲ. ನನ್ನ ತಂದೆ ನನಗೆ ಸರಕಾರಿ ನೌಕರಿ ಸಲುವಾಗಿ ಸದರಿ ಅಪ್ಪಸಾಬ ರವರನ್ನು ಭೇಟಿಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿನಾಯಕ ರವರು ಸಹ ಅಪ್ಪಸಾಬರವರನ್ನು ಭೇಟಿಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪ್ಪಸಾಬ ರವರು ಸರಿಕಾರಿ ನೌಕರಿಗಾಗಿ ತರಬೇತಿ ಕೂಡಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯಕ್ಕೆ ಆರೋಪಿಯು ಸಹ ಅಂಗವಿಕಲ ದಲ್ಲಿ ಕೆಲಸ ಕೂಡಿಸಲು ಅಪ್ಪಸಾಬ ಬಳಿ ಬಂದಿದ್ದರು ಎಂದರೆ ನನಗೆ ಗೂತ್ತಿಲ್ಲ. ಆ ಸಮಯಕ್ಕೆ ಆರೋಪಿ ಹಾಗೂ ನನ್ನ ತಂದೆಯ ಪರಿಚಯ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಸದರಿ ಕೆಲಸಕ್ಕಾಗಿ ಅಪ್ಪಸಾಬ ರವರ ಬಳಿ ಹಣ ಕೂಡವುದ್ದಾಗಿ ಮಾತನಾಡಿದ್ದರೂ ಎಂದರೆ ನನಗೆ ಗೊತ್ತಿಲ್ಲ. ಮುಂಗಡವಾಗಿ ಹಣ ಸಹ ಪಾವತಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಪರೀಕ್ಷೆ ಪಾಸ ಮಾಡಿದ್ದಲ್ಲಿ ಕೆಲಸ ಕೂಡಿಸುವುದಾಗಿ ಅರಳಿರವರು ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯಕ್ಕೆ ನನ್ನ ತಂದೆ ಅರಳಿ ಕಡೆಯಿಂದ ಖಾಲಿ ಚಕ್ ನ್ನು ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯಕ್ಕೆ ಆರೋಪಿ ಸಹ ಖಾಲಿ ಚೆಕ್ ನ್ನು ಭದ್ರತೆಗಾಗಿ ಸದರಿ ಅರಳಿಯವರೆಗೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ಪರೀಕ್ಷೆಯನ್ನು ಬರೆದಿದ್ದು ಅರಳಿಯವರ ಬಳಿ ಹೋಗಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನಂತರ ನಾನು ಪರೀಕ್ಷೆಯನ್ನು ಪಾಸ ಮಾಡಲಿಲ್ಲ ಎಂದರೆ ಸರಿಯಲ್ಲ. ಆಗ ಅರಳಿಯವರು ಆರೋಪಿಯ ಚೆಕ್ ನ್ನು ನನ್ನ ತಂದೆಗೆ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಎಲ್ಲಾ ವಿಷಯ ನನಗೆ ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುುತ್ತಿದ್ದೇನೆ ಎಂದರೆ ಸರಿಯಲ್ಲ.

5. ನನ್ನ ತಂದೆ ಅರಳಿಯವರ ವಿರುದ್ದ ಸಿಸಿ 496/2019 ನ್ನು ಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿಯ ಸದರಿ ದೂರಿನ ಪ್ರತಿಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ 2 ಎಂದು

ಗುರುತಿಸಲಾಯಿತು. ಅದೇ ರೀತಿ ವಿನಾಯಕ ಮಲ್ಲಪ್ಪ ಕುರಿ ರವರು ಸಹ ಅಪ್ಪಸಾಬ ಅರಳಿರವರ ವಿರುದ್ದ ಸಿಸಿ ನಂಬರ 493/2019 ನ್ನು ಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿಯ ಸದರಿ ದೂರಿನ ಪ್ರತಿಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ 3 ಎಂದು ಗುರುತಿಸಲಾಯಿತು. ಸದರಿ ಎರಡು ಪ್ರಕರಣಗಳನ್ನು ಹಾಗೂ ಪ್ರಸ್ತುತ ಪ್ರಕರಣವನ್ನು ಒಂದೇ ದಿನ ಒಂದೇ ವಕೀಲರ ಮುಖಾಂತರ ಸಲ್ಲಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪ್ಪಸಾಬ ಅರಳಿ ರವರು ಮೃತ ಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಸದರಿ ಎರಡು ಪ್ರಕರಣಗಳು ವಜಾ ಆಗಿರುತ್ತವೆ ಎಂದರೆ ಸರಿ. ಸಾಕ್ಷಿಯ ಸದರಿ ಪ್ರಕರಣಗಳ ಆದೇಶ ಪುಟಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಅದನ್ನು ನಿಡಿ 4 ಮತ್ತು 5 ಎಂದು ಗುರುತಿಸಲಾಯಿತು.

**ಮುಂದುವೆರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**